# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 21 ನೇ ಅಕ್ಟೋಬರ್ ಮಾಹೆ 2022 ನೇ ಇಸವಿ.

**ಸಿ.ಸಿ. ನಂಃ 98/2019**

ಶ್ರೀ ಅರುಣ್ ಕುಮಾರ್ ಶೆಟ್ಟಿ
ಪ್ರಾಯಃ 52 ವರ್ಷ,
ತಂದೆಃ ದಿ. ಮಹಾಬಲ ಶೆಟ್ಟಿ
ವಾಸಃ ಬ್ರಾಹ್ಮರಿ,
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಹತ್ತಿರ,
ಕುಕ್ಕುಂದೂರು ಗ್ರಾಮ, ಕಾರ್ಕಳ ತಾಲೂಕು. ... ಪಿರ್ಯಾದುದಾರರು

- ವಿರುದ್ಧ -

ಶ್ರೀ ಮಂಜುನಾಥ್,
ಪ್ರಾಯ 47 ವರ್ಷಗಳು,
ತಂದೆಃ ದಿ. ಎಸ್. ರಾಜು,
ವಾಸಃ 5 ಸೆಟ್ ಕಾಲೋನಿ,
ಪಿಲಿಚಂಡಿ ಸ್ಥಾನದ ಹತ್ತಿರ,
ಕುಕ್ಕುಂದೂರು ಗ್ರಾಮ, ಕಾರ್ಕಳ ತಾಲೂಕು. ... ಆರೋಪಿ

## ಆಪಾದನೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿಃ 07.11.2018 ರಂದು ರೂ. 1,50,000/- ಗಳಿಗೆ ವಿಜಯಾ ಬ್ಯಾಂಕ್, ಕುಕ್ಕುಂದೂರು ಶಾಖೆ, ಚೆಕ್ ಸಂಃ 201251 ನ್ನು ನೀಡಿದ್ದು, ಪಿರ್ಯಾದಿದಾರರು ಅದನ್ನು ನಗದೀಕರಿಸಲು ವಿಜಯಾ ಬ್ಯಾಂಕ್, ಕುಕ್ಕುಂದೂರು ಶಾಖೆಗೆ ಹಾಜರುಪಡಿಸಿದ್ದು, ಆದರೆ ' Insufficient Funds' ಎಂಬ ವಿಷಯವನ್ನು ಸದರಿ ಬ್ಯಾಂಕಿನವರು ದಿಃ 28.11.2018 ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಿದಾರರು ದಿಃ

29.11.2018 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸನ್ನು ನೀವು ದಿಃ 04.12.2018 ಸ್ವೀಕರಿಸಿದ್ದು, ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ  ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.